ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

# ಪತ್ರಿಕಾ ತುಣುಕುಗಳು
# PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 10/03/2020

### ಸದನದಲ್ಲಿ ವಿವಾದ ಎಬ್ಬಿಸಿದ ಸಿ.ಟಿ ರವಿ ಹೇಳಿಕೆ

## ಸಂವಿಧಾನಕ್ಕೆ ಟೈಂ ಬಾಂಬ್ ಫಿಕ್ಸ್

ಸಂವಿಧಾನಕ್ಕೆ ಟೈಂ ಬಾಂಬ್ ಫಿಕ್ಸ್ ಆಗಿದೆ' ಎಂದು ಪ್ರವಾಸೋದ್ಯಮ ಹಾಗೂ ಕನ್ನಡ-ಸಂಸ್ಕೃತಿ ಸಚಿವ ಸಿ.ಟಿ.ರವಿ ಮಾಡಿರುವ ವ್ಯಾಖ್ಯಾನ ವಿಧಾನಸಭೆಯಲ್ಲಿ ತೀವ್ರ ಚರ್ಚೆಗೆ ಕಾರಣವಾಗಿದೆ.

ತಮ್ಮ ಈ ಹೇಳಿಕೆ ಮೂಲಕ ಇಷ್ಟು ದಿನಗಳ ಕಾಲ ನಡೆಯುತ್ತಿದ್ದ 'ಸಂವಿಧಾನ ಚರ್ಚೆ'ಗೆ ಸಿ.ಟಿ.ರವಿ ವಿವಾದದ ಹೊಸ ರೂಪ ನೀಡಿದ್ದಾರೆ. ಮೀಸಲು ನೀತಿ, ಕಾಶ್ಮೀರ ವಿವಾದ, ಕೋಮು ಹಾಗೂ ಜಾತಿ ಆಧಾರಿತ ಯೋಜನೆಗಳ ಬಗ್ಗೆ ಅವರು ಮಾಡಿರುವ ವ್ಯಾಖ್ಯಾನಕ್ಕೆ ಕಾಂಗ್ರೆಸ್ ತೀವ್ರ ವಿರೋಧ ವ್ಯಕ್ತಪಡಿಸಿದೆ. ಆದರೆ 'ಸಂವಿಧಾನಕ್ಕೆ ಟೈಂ ಬಾಂಬ್ ಫಿಕ್ಸ್ ಆಗಿದೆ ' ಎಂದು ಅವರು ಮಾಡಿರುವ ವ್ಯಾಖ್ಯಾನದ ವಿಸ್ತರಣೆಗೆ ಪ್ರತಿಪಕ್ಷಗಳು ಸದನದಲ್ಲಿ ಅವಕಾಶ ಮಾಡಿಕೊಟ್ಟಿಲ್ಲ.

ಆದರೆ 'ಕಾಶ್ಮೀರಿ ಪಂಡಿತರನ್ನು ಹೊರ ಹಾಕಿದ ಶಕ್ತಿ ಮತ್ತು ಮನಸ್ಥಿತಿ ವಿಜೃಂಭಿಸಿದರೆ ಸಂವಿಧಾನ ಉಳಿಯುತ್ತದೆಯೇ? ಆ ಸ್ಥಿತಿ ಇಡಿ ದೇಶಕ್ಕೆ ವ್ಯಾಪಿಸಬಾರದು. ಕಾಶ್ಮೀರದಲ್ಲಿ ಸಂವಿಧಾನವನ್ನು ಅಲ್ಲಿನ ಅಲ್ಪ ಸಂಖ್ಯಾತರು ಗೌರವಿಸುತ್ತಿದ್ದರು. ಬಹು ಸಂಖ್ಯಾತರು ವಿರೋಧಿಸಿದರು. ಓಲೈಕೆ ರಾಜಕಾರಣ ಹಾಗೂ ಕೋಮು ಆಧಾರಿತ ಯೋಜನೆಗಳು ಸಂವಿಧಾನವನ್ನು ದುರ್ಬಲಗೊಳಿಸುತ್ತವೆ. ನಾನು ಎ.ಪಿ.ಜೆ.ಅಬ್ದುಲ್ ಕಲಾಂ ಅವರ ನಾಯಕತ್ವವನ್ನು ಒಪ್ಪಿಕೊಳ್ಳುತ್ತೇನೆಯೇ ಹೊರತು ಒಸಾಮಾ ಬಿನ್ ಲಾಡೆನ್ ನಾಯಕತ್ವವನ್ನಲ್ಲ. ತುಕ್ಡೆ, ತುಕ್ಡೆ ಗ್ಯಾಂಗ್ ಜತೆಗೆ ವೇದಿಕೆ ಹಂಚಿಕೊಳ್ಳುವವರಿಂದ ಸಂವಿಧಾನ ಉಳಿಯುವುದಿಲ್ಲ ಎಂದರು.

**ತ್ಯಾಗ ಮಾಡಲಿ:** ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರ ನೈಜ ಆಶಯವನ್ನು ನಾವು ಅನುಸರಿಸಬೇಕು. ಬಡ ದಲಿತರಿಗಾಗಿ ಬಲಿತ ದಲಿತರು ಸವಲತ್ತು ಹಾಗೂ ರಾಜಕೀಯ ಮೀಸಲನ್ನು ಬಿಟ್ಟುಕೊಡಬೇಕು. ಬಲಿತವರು ಬಡವರನ್ನು ಅದೇ ಗುಡಿಸಲಲ್ಲಿ ಇರುವಂತೆ ಮಾಡುವುದು ಸಂವಿಧಾನಕ್ಕೆ ನೀಡುವ ಗೌರವವೇ? ಈ ರೀತಿ ಅಂಬೇಡ್ಕರ್‌ಗೆ ಗರ್ಭಗುಡಿ ಕಟ್ಟಿ ಶೋಷಣೆ ಮಾಡುವ ಪೂಜಾರಿಯಾಗಬಾರದು ಎಂದು ಅಭಿಪ್ರಾಯಪಟ್ಟರು.

ಸಂವಿಧಾನಕ್ಕೆ ಇದುವರೆಗೆ 104 ಬಾರಿ ತಿದ್ದುಪಡಿ ಮಾಡಲಾಗಿದೆ. ಕಾಂಗ್ರೆಸ್ ಆಡಳಿತದಲ್ಲಿ 75 ಬಾರಿ, ಜನತಾ ಪಕ್ಷದ ಕಾಲಾವಧಿಯಲ್ಲಿ 9 ಬಾರಿ, ಅಟಲ್ ಬಿಹಾರಿ ವಾಜಪೇಯಿ ಸರಕಾರದಲ್ಲಿ 14 ಹಾಗೂ ಮೋದಿ ಅಧಿಕಾರಾವಧಿಯಲ್ಲಿ 6 ಬಾರಿ ತಿದ್ದುಪಡಿ ತರಲಾಗಿದೆ. ಆದರೆ ತುರ್ತು ಪರಿಸ್ಥಿತಿ ಹೇರಿ ಮೂಲಭೂತ ಹಕ್ಕಿಗೆ ಚ್ಯುತಿ ತಂದಿದ್ದು ಕಾಂಗ್ರೆಸ್. ಸಮಾಜವಾದಿ ಹಾಗೂ ಜಾತ್ಯತೀತ ಎಂಬ ಶಬ್ದ ಸಂವಿಧಾನದ ಮೂಲ ಪೂರ್ವಪೀಠಿಕೆಯಲ್ಲಿ ಇರಲಿಲ್ಲ. ಅದನ್ನು ಆ ಬಳಿಕ ಸೇರಿಸಲಾಯಿತು. ಯಾರು ಸಂವಿಧಾನಕ್ಕೆ ಜಾತ್ಯತೀತ ಎಂಬ ಪದವನ್ನು ಸೇರಿಸಿದರೋ, ಅವರ ಕಾಲಾವಧಿಯಲ್ಲೇ ಕಂಬಾಲಪಲ್ಲಿ, ಬಡನವಾಳದಂಥ ಹತ್ಯಾಕಾಂಡಗಳು ನಡೆದವು ಎಂದು ಆರೋಪಿಸಿದರು.



**ಸಂವಿಧಾನ ಬದಲಾವಣೆಗೆಂದೇ ಚರ್ಚೆ ಆರಂಭಿಸಿದ್ದೀರಾ?**

ಸಂವಿಧಾನವನ್ನು ಬದಲಾಯಿಸಬೇಕೆಂಬ ನಿಮ್ಮ ಉದ್ದೇಶಕ್ಕೆ ಅಡಿಪಾಯ ಹಾಕುವುದಕ್ಕಾಗಿಯೇ 'ಸಂವಿಧಾನದ ಚರ್ಚೆ'ಗೆ ನೀವು ಚಾಲನೆ ನೀಡಿದ್ದೀರೇನೋ ಎಂಬ ಸಂಶಯ ನನ್ನಲ್ಲಿ ಮೂಡಿತ್ತು ಎಂದು ಮಾಜಿ ಡಿಸಿಎಂ ಡಾ.ಜಿ.ಪರಮೇಶ್ವರ ಹೇಳಿಕೆ ವಿಧಾನಸಭೆಯಲ್ಲಿ ಹೊಸ ಚರ್ಚೆಗೆ ಕಾರಣವಾಯಿತು. ಸಂವಿಧಾನದ ಚರ್ಚೆಯಲ್ಲಿ ಅವರು ವಿಚಾರ ಪ್ರಸ್ತಾಪಿಸಿದಾಗ ಯಡಿಯೂರಪ್ಪ ಹಾಗೂ ಸ್ಪೀಕರ್ ವಿಶ್ವೇಶ್ವರ ಆಕ್ಷೇಪಿಸಿದರು. ಇದಕ್ಕೆ ಉತ್ತರಿಸಿದ ಪರಮೇಶ್ವರ, ನಾನು ಮಾತು ಪೂರ್ಣಗೊಳಿಸುವುದಕ್ಕೆ ಮುನ್ನವೇ ನೀವು ಆಕ್ಷೇಪಿಸುತ್ತಿದ್ದೀರಿ. ನನ್ನಲ್ಲಿ ಈ ಸಂಶಯ ಮೂಡಿದ್ದು ಸತ್ಯ. ಆದರೆ ಆರ್‌ಎಸ್‌ಎಸ್ ಮುಖ್ಯಸ್ಥರು ' ಸಂವಿಧಾನವನ್ನು ಹೊರತುಪಡಿಸಿ ಇನ್ಯಾವುದೇ ಕಾನೂನನ್ನು ನಾವು ಬಯಸುವುದಿಲ್ಲ ಎಂದು ನೀಡಿದ ಹೇಳಿಕೆಯಿಂದ ಆ ಸಂಶಯ ದೂರವಾಗಿದೆ' ಎಂದು ಸ್ಪಷ್ಟಪಡಿಸಿದರು.